# ಇಂದಿರಾಗಾಂಧಿ ಭೇಟಿ ನೆನಪು ಸ್ಮರಣೀಯ

**ದೆಹಲಿಗೆ ಹೋಗಿ ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರನ್ನು ಭೇಟಿ ಮಾಡಿ ಮಾತನಾಡಿದ್ದು ಎಂದಿಗೂ ಮರೆಯಲಾಗದ ಸವಿ ನೆನಪು. ಅವರ ಆತಿಥ್ಯ, ಸರಳತೆ, ದೊಡ್ಡಗುಣ ಇತರರಿಗೂ ಮಾದರಿ.**

■ ಎಂ.ಎಸ್. ನಾಗೇಂದ್ರ



ಕಳೆದ ಶತಮಾನದ ಅರವತ್ತು ಎಪ್ಪತ್ತರ ದಶಕಗಳಲ್ಲಿ ತಾಂತ್ರಿಕ ಶಿಕ್ಷಣಾರ್ಥಿಗಳು ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳುವುದು ಸಾಮಾನ್ಯವಾಗಿತ್ತು. ಕೆಲವು ಕಾಲೇಜುಗಳಲ್ಲಿ ಅದು ಕಡ್ಡಾಯವಾಗಿತ್ತೆಂದು ನೆನಪು.

ಮೈಸೂರಿನ ಸಿ.ಪಿ.ಸಿ ಪಾಲಿಟೆಕ್ನಿಕ್‌ನ ವಿದ್ಯಾರ್ಥಿಗಳಾದ ನಾವು 1966ರ ಡಿಸೆಂಬರ್‌ನಲ್ಲಿ ಉತ್ತರ ಭಾರತದ ಪ್ರವಾಸಕ್ಕೆಂದು ಹೊರಟೆವು. ಹೊರಡುವ ಒಂದು ತಿಂಗಳು ಮುಂಚೆಯೇ ಭೇಟಿ ನೀಡುವ ಕಾರ್ಖಾನೆಗಳ ಮುಖ್ಯಸ್ಥರಿಂದ ಅನುಮತಿ ಪತ್ರವನ್ನು ತರಿಸಿಕೊಂಡಿದ್ದೆವು. ಹಾಗೆಯೇ ನವದೆಹಲಿಯಲ್ಲಿ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರನ್ನು ಭೇಟಿ ಮಾಡಲು ಅವರ ಕಾರ್ಯಾಲಯದಿಂದಲೂ ಅನುಮತಿಯನ್ನು ಪಡೆದುಕೊಂಡಿದ್ದೆವು.

ಡಿಸೆಂಬರ್ 21ರಂದು ಬೆಳಿಗ್ಗೆ 7 ಗಂಟೆಗೇ ಅವರ ನಿವಾಸಕ್ಕೆ ಬರಲು ತಿಳಿಸಲಾಗಿತ್ತು. ನಾವೆಲ್ಲ ಬೆಳಿಗ್ಗೆಯೇ ತಯಾರಾಗಿ ಚಳಿಯಲ್ಲೇ ಅವರ ನಿವಾಸವನ್ನು ತಲುಪಿ ಅಲ್ಲಿ ನಮ್ಮಂತೆಯೇ ಇತರ ಕಡೆಗಳಿಂದ ಬಂದಿದ್ದ ಗುಂಪುಗಳಂತೆ ನಾವೂ ಒಂದು ಗುಂಪಿನಲ್ಲಿ ನಿಂತಿದ್ದೆವು. ಆಗ ಆ ಭವ್ಯ ಭವನದಿಂದ ಹೊರಬಂದ ಮಧ್ಯ ವಯಸ್ಸಿನ ಮಹಿಳೆಯೊಬ್ಬರು ಎಲ್ಲ ಗುಂಪುಗಳೂ ವ್ಯವಸ್ಥಿತವಾಗಿ ಕುಳಿತುಕೊಳ್ಳುವ ಏರ್ಪಾಡು ಮಾಡುತ್ತ ನಮ್ಮ ಬಳಿ ಬಂದಾಗ 'ನೀವು ಮೈಸೂರಿನವರೆಲ್ಲ ಇಲ್ಲಿ ಕುಳಿತುಕೊಳ್ಳಿ' ಎಂದು ಕನ್ನಡದಲ್ಲಿ ಹೇಳಿದಾಗ ನಮಗೆಲ್ಲ ಆಶ್ಚರ್ಯವೂ ಸಂತೋಷವೂ ಆಗಿತ್ತು. ನಂತರದಲ್ಲಿ ಅವರ ಹೆಸರು ಸರೋಜಿನಿ ಮಹಿಷಿ ಎಂದು ತಿಳಿಯಿತು. (ಕನ್ನಡಿಗರಿಗೇ ಉದ್ಯೋಗ ಮೀಸಲಿಗೆ ಸಂಬಂಧಿಸಿದ 'ಸರೋಜಿನಿ ಮಹಿಷಿ ವರದಿ'ಯನ್ನು ನೆನಪಿಸಿಕೊಳ್ಳಬಹುದು)

ಸ್ವಲ್ಪ ಸಮಯದಲ್ಲೇ ಇಂದಿರಾ ಗಾಂಧಿಯವರು ಶಾಲು ಹೊದ್ದು ಲವಲವಿಕೆಯಿಂದ ನಡೆಯುತ್ತ ಎಲ್ಲ ಗುಂಪುಗಳ ಜೊತೆಗೂ ಫೋಟೊ ತೆಗೆಸಿಕೊಳ್ಳುತ್ತ ನಮ್ಮ ಗುಂಪಿನ ಬಳಿಗೂ ಬಂದರು. ಮೊದಲೇ ಕೊಟ್ಟಿದ್ದ ಸೂಚನೆಯಂತೆ ನಾವೆಲ್ಲ ಶಿಸ್ತಾಗಿ ಕುಳಿತಿದ್ದೆವು. ಫೋಟೊಗ್ರಾಫರ್ ಚಿತ್ರ ತೆಗೆಯುತ್ತಿದ್ದಂತೆ ಇಂದಿರಾಗಾಂಧಿಯವರು ಹಿಂದಿಯಲ್ಲಿ 'ಅರೆ, ಅವರು ಇನ್ನೂ ಸರಿಯಾಗಿ ಕುಳಿತೇ ಇರಲಿಲ್ಲ, ಆಗಲೇ ತೆಗೆದುಬಿಟ್ಟಿರಲ್ಲ; ಇನ್ನೊಮ್ಮೆ ಸರಿಯಾಗಿ ತೆಗೆಯಿರಿ' ಎಂದು ಕಾಳಜಿಯಿಂದ ಹೇಳಿದ್ದು ಇನ್ನೂ ನೆನಪಿದೆ.

ನಮ್ಮ ಆಟೋಗ್ರಾಫ್ ಪುಸ್ತಕಗಳನ್ನು ಮುಂಚೆಯೇ ಅವರ ಕಚೇರಿಗೆ ಕೊಟ್ಟಿದ್ದೆವು, ಅವೆಲ್ಲದರಲ್ಲೂ ಅವರು ಸಹಿ ಮಾಡಿ ಇಟ್ಟಿದ್ದನ್ನು ನಾವು ನಂತರದಲ್ಲಿ ಪಡೆದುಕೊಂಡೆವು. ಇಂದಿರಾ ಗಾಂಧಿಯವರು ಕೆಲವೇ ನಿಮಿಷಗಳು ನಮ್ಮೊಡನೆ ಇದ್ದರೂ ಅವರ ವ್ಯಕ್ತಿತ್ವದ ನೆನಪು ಮಾತ್ರ ಎಂದಿಗೂ ಮಾಸದು. ಒಂದು ಛಾಯಾಚಿತ್ರಕ್ಕೆ 5 ರೂ.ನಂತೆ ಎರಡು ಚಿತ್ರಗಳನ್ನು ಪಡೆದುಕೊಂಡಿದ್ದೆ. ಆ ಚಿತ್ರವನ್ನು ನೋಡಿದಾಗಲೆಲ್ಲ ನನ್ನ ನೆನಪಿನಾಳದಿಂದ ಎಲ್ಲ ವಿವರಗಳೂ ಹೊರಬರುತ್ತವೆ. ಎಂತಹ ಸುಂದರ ನೆನಪು ಎನಿಸುತ್ತದೆ. ಇಂದಿರಾಗಾಂಧಿ ಅವರ ಆದರ್ಶ ಗುಣಗಳನ್ನು ಬಹುವಾಗಿ ಮೆಚ್ಚಿರುವ ನನಗೆ ಅವರ ಜೀವನಪ್ರೀತಿ ರಾಜಕಾರಣದಲ್ಲಿನ ಚತುರತೆ ಮುಂತಾದವು ಬಹಳ ಇಷ್ಟ. ■